**ಸಾಕ್ಷಿಗೆ ದಿನಾಂಕ : *23-08-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು : *13* ರಿಂದ *16* ನೇ ಪ್ರತಿವಾದಿಯರ ಪರ ಶ್ರೀಮತಿ ವಿ ಎನ್ ಹೆಚ್ ವಕೀಲರಿಂದ :</u>**

ನಮ್ಮ ಮನೆತನದ ಮೂಲ ಪುರುಷ ರುದ್ರಪ್ಪ ಮಹಾಲಿಂಗಪ್ಪ ಗೋಕಾವಿ. ರುದ್ರಪ್ಪ ರವರ ಹೆಂಡತಿಯ ಹೆಸರು ನೀಲವ್ವ. ರುದ್ರಪ್ಪ ಮತ್ತು ನೀಲವ್ವ ರವರಿಗೆ ಒಟ್ಟು *4* ಜನ ಮಕ್ಕಳಿದ್ದು, ಅವರೆಂದರೆ,ಶಂಕ್ರವ್ವ, ಚನ್ನಬಸಪ್ಪ,ವೀರಪ್ಪ(ಈರಪ್ಪ) ಮತ್ತು ಚನ್ನಪ್ಪ. ರುದ್ರಪ್ಪ ರವರು *1994* ರಲ್ಲಿ ತೀರಿಕೊಂಡಿರುತ್ತಾರೆ. ರುದ್ರಪ್ಪ ರವರು ಜೀವಂತ ಇದ್ದಾಗ ಮನೆತನದ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿದಾರರು ಈರಪ್ಪ ರವರು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಚನ್ನಬಸಪ್ಪ ರವರು *1989* ರಲ್ಲಿ ತೀರಿಕೊಂಡಿರುತ್ತಾರೆ. ಚನ್ನಬಸಪ್ಪ ರವರ ಹೆಂಡತಿ ಮತ್ತು ಮಕ್ಕಳು ಜೀವಂತ ಇರುತ್ತಾರೆ.ಚನ್ನಬಸಪ್ಪ ರವರ ಹೆಂಡತಿಯ ಹೆಸರು ಬಸಮ್ಮ ಮತ್ತು ಮಕ್ಕಳೆಂದರೆ, ಈರಣ್ಣ, ಶಾಂತವ್ವ, ಶೋಭಾ,ಮಾಲಾ, ಗೀತಾ ಮತ್ತು ಭಾರತಿ. ಚೆನ್ನಬಸಪ್ಪ ರವರು ಕೆ ಹೆಚ್ ಡಿ ಸಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆಯ ಹೆಸರು ಚನ್ನಪ್ಪ. ಈರಪ್ಪ ರವರು ನನ್ನ ತಂದೆಯ ಅಣ್ಣ. ಈರಪ್ಪ ರವರ ಹೆಂಡತಿಯ ಹೆಸರು ಗಂಗವ್ವ. ಈರಪ್ಪ ಮತ್ತು ಗಂಗವ್ವ ರವರಿಗೆ ಮಕ್ಕಳು ಇರುವುದಿಲ್ಲ. ಚನ್ನಬಸಪ್ಪ ರವರು ಎಲ್ಲಿ ಎಲ್ಲಿ ಕೆಲಸ ಮಾಡಿರುತ್ತಾರೋ ಅಲ್ಲಿ ತಮ್ಮ ಹೆಂಡತಿ ಮತ್ತು ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದರು. ನಮ್ಮ ಮನೆತನಕ್ಕೆ *2* ಹೊಲ ಮತ್ತು *2* ಮನೆ ಮತ್ತು *2* ಪ್ಲಾಟಗಳು ಇರುತ್ತವೆ. ತುಳಸಿಗೇರಿ ಗ್ರಾಮದಲ್ಲಿ ಸರ್ವೆ ನಂ. *213/*ಸಿ ಕ್ಷೇತ್ರ *4* ಎಕರೆ ಮತ್ತು ಅಮೀನಗಡ ಗ್ರಾಮದಲ್ಲಿ ಸರ್ವೆ ನಂ. *315* ಕ್ಷೇತ್ರ *6* ಎಕರೆ *18* ಗುಂಟೆ ಇರುತ್ತದೆ. ಮನೆ ನಂ. *479* ಮತ್ತು *14* ಎಂದು ಇರುತ್ತದೆ. ಪ್ಲಾಟಗಳ ನಂ. *11* ಎ ಮತ್ತು *11* ಎಂದು ಇರುತ್ತವೆ. ರುದ್ರಪ್ಪರವರ ಮಗಳು ಶಂಕ್ರವ್ವರವರು ಬೀಳಗಿ ತಾಲೂಕಿನ ನಾಗರಾಳ ಗ್ರಾಮದಲ್ಲಿ ಇದ್ದರು. ಶಂಕ್ರವ್ವ ರವರು *2016* ರಲ್ಲಿ ತೀರಿಕೊಂಡಿರುತ್ತಾರೆ. ಪ್ರತಿವಾದಿ ನಂ. *13* ರಿಂದ *16* ರವರು ಮೃತ ಶಂಕ್ರವ್ವ ರವರ ಮೊಮ್ಮಕ್ಕಳು. ನಮ್ಮ ಮನೆತನದಲ್ಲಿ *1995* ರಲ್ಲಿ ಪಾಲುವಾಟ್ನಿ ಆಗಿರುತ್ತದೆ . ನಾನು

ನನ್ನ ಪ್ರತಿವಾದ ಪತ್ರದಲ್ಲಿನ ಮಾಹಿತಿಯನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ದಿನಾಂಕ *11-08-1995* ರಂದು ಗುರುಹಿರಿಯರ ಸಮಕ್ಷಮದಲ್ಲಿ ಪಾಲುವಾಟ್ನಿ ಕುರಿತು ವಾಟ್ನಿ ಸ್ಮರಣಾರ್ಥ ಟಿಪ್ಪಣಿ ಆಗಿರುತ್ತದೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿದ್ದು, ಈ ಕುರಿತು ಸದರಿ ಟಿಪ್ಪಣಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಅದನ್ನು ತಹಶೀಲ್ದಾರ ಕಚೇರಿಗೆ ಕೊಟ್ಟಿರುತ್ತೇವೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದು ಹೇಳುತ್ತಾರೆ. ವಾಟ್ನಿ ಸ್ಮರಣಾರ್ಥ ಟಿಪ್ಪಣಿಯನ್ನು ಓದಿರುತ್ತೇನೆ. ವಾಟ್ನಿ ಸ್ಮರಣಾರ್ಥ ಟಿಪ್ಪಣಿಯನ್ನು ವಾದಿ ಮತ್ತು ಪ್ರತಿವಾದಿಯರು ಎಲ್ಲರೂ ಕೂಡಿ ಮಾಡಿಕೊಂಡಿರುತ್ತೇವೆ ಮತ್ತು ಎಲ್ಲರೂ ಸಹಿ ಮಾಡಿರುತ್ತಾರೆ. ಸಾಕ್ಷಿದಾರರು ಮುಂದುವರೆದು *13* ರಿಂದ *16* ನೇ ಪ್ರತಿವಾದಿಯರು ಸಹಿ ಮಾಡಿರುವುದಿಲ್ಲ ಮತ್ತು ಅವರ ಅಜ್ಜಿಯಾದ ಶಂಕ್ರಮ್ಮ ರವರ ಸಹಿ ಇರುತ್ತದೆ ಎಂದು ಹೇಳುತ್ತಾರೆ. ವಾಟ್ನಿ ಸ್ಮರಣಾರ್ಥ ಟಿಪ್ಪಣಿಗೆ ಸಾಕ್ಷಿದಾರರಾಗಿ ಪರುತಪ್ಪ ಸಿಂಹಾಸನ, ಸಂಗಪ್ಪ ದಡ್ಡೆಣ್ಣವರ, ಎಸ್ ಜಿ ಹಳ್ಳೂರ ರವರು ಸಹಿ ಮಾಡಿರುತ್ತಾರೆ. ವಾಟ್ನಿ ಸ್ಮರಣಾರ್ಥ ಟಿಪ್ಪಣಿಗೆ *1* ನೇ ವಾದಿಯ ಗಂಡ ಮೊದಲು ಸಹಿ ಮಾಡಿದ್ದು, ನಂತರ *1* ನೇ ವಾದಿ ಸಹಿ ಮಾಡಿರುತ್ತಾರೆ. ವಾಟ್ನಿ ಸ್ಮರಣಾರ್ಥ ಟಿಪ್ಪಣಿಯನ್ನು ಖೊಟ್ಟಿಯಾಗಿ ಹುಟ್ಟಿಸಿಕೊಂಡಿದ್ದು ಮತ್ತು ಅದಕ್ಕೆ ವಾದಿಯರದು ಮತ್ತು *13* ರಿಂದ *16* ನೇ ಪ್ರತಿವಾದಿಯರ ಅಜ್ಜಿಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾಟ್ನಿ ಸ್ಮರಣಾರ್ಥ ಟಿಪ್ಪಣಿ ಆದಾಗ ಶಂಕ್ರವ್ವ ರವರಿಗೆ ಹಣ ಮತ್ತು ಬಂಗಾರವನ್ನು ಕೊಟ್ಟಿದ್ದು, ಆದರೆ ಅದನ್ನು ಟಿಪ್ಪಣಿಯಲ್ಲಿ ನಮೂದಿಸಿರುವುದಿಲ್ಲ. ವಾಟ್ನಿ ಸ್ಮರಣಾರ್ಥ ಟಿಪ್ಪಣಿಗೆ ನನ್ನ ಸಹಿ ಇರುವುದಿಲ್ಲ. ಶಂಕ್ರವ್ವ ರವರಿಗೆ ಎಷ್ಟು ಹಣ ಮತ್ತು ಬಂಗಾರ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಅವರಿಗೆ ಹಣ ಮತ್ತು ಬಂಗಾರ ಕೊಟ್ಟ ಬಗ್ಗೆ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಇಬ್ಬರೂ ನನಗೆ ಹೇಳಿರುತ್ತಾರೆ. *1995* ರಲ್ಲಿ ನನ್ನ ತಂದೆ, ನನ್ನ ದೊಡ್ಡಪ್ಪ ಮತ್ತು ನನ್ನ ಚಿಕ್ಕಪ್ಪ ರವರ ನಡುವೆ ಅಫಸಾತ್ ವಾಟ್ನಿ ಪತ್ರ ಆಗಿದ್ದು, ನಾವು ಅದರಂತೆ ನಡೆದುಕೊಂಡು ಬಂದಿದ್ದೇವೆ. ನನ್ನ ಪ್ರತಿವಾದ ಪತ್ರದ *26* ನೇ ಪ್ಯಾರಾದಲ್ಲಿ *1995* ರಿಂದ ವಾದಿಯರ ಮತ್ತು ಪ್ರತಿವಾದಿಯರ ನಡುವೆ ಏಕತ್ರ ಕುಟುಂಬ ಇರುವುದಿಲ್ಲ ಮತ್ತು *1995* ರಲ್ಲಿ ಮನೆತನದಲ್ಲಿ ಆದ ಪಾಲುವಾಟ್ನಿ ಪ್ರಕಾರ

ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ತಮ್ಮ ತಮ್ಮ ಸ್ವಾಧೀನಕ್ಕೆ ಪಡೆದುಕೊಂಡು ವಹಿವಾಟು ಉಪಭೋಗ ಮಾಡುತ್ತಾ ಬಂದಿರುತ್ತಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. *1995* ರಲ್ಲಿ ನನಗೆ *30* ವರ್ಷ ವಯಸ್ಸು ಇತ್ತು. *1995* ರಲ್ಲಿ ಸರ್ವೆ ನಂ.*317* ಪಾಲುವಾಟ್ನಿ ಪ್ರಕಾರ ಈರಪ್ಪ ರವರಿಗೆ ಬಂದಿದ್ದು, ನಂತರ ಅದರಲ್ಲಿ *2* ಭಾಗಗಳನ್ನಾಗಿ ಮಾಡಿ ಒಂದು ಚನ್ನಪ್ಪ ಮತ್ತು ಇನ್ನೊಂದು ಈರಪ್ಪ ರವರಿಗೆ ಕೊಟ್ಟಿದ್ದರು. ಸರ್ವೆ ನಂ. *317* ರಲ್ಲಿ ಚನ್ನಬಸಪ್ಪ ರವರಿಗೆ ಪಾಲು ಕೊಟ್ಟಿರುವುದಿಲ್ಲ. ಆದರೆ ಅವರಿಗೆ ತುಳಸಿಗೇರಿ ಗ್ರಾಮದಲ್ಲಿರುವ ಜಮೀನಿನಲ್ಲಿ ಪಾಲು ಕೊಟ್ಟಿರುತ್ತಾರೆ. *2008* ರಲ್ಲಿ ಸರ್ವೆ ನಂ. *317* ರಲ್ಲಿ ಪಾಲುವಾಟ್ನಿ ಮಾಡಿಕೊಂಡಿರುತ್ತೇವೆ. ಈ ಕುರಿತು ಡ ನಂ. *4086* ರಚನೆ ಆಗಿರುತ್ತದೆ. ಈರಪ್ಪ ರವರು ಸರಕಾರಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.